# ಟ್ರೆಂಡ್ ಸೃಷ್ಟಿಸಿದ
# ರಫೆಲ್ ಜೀನ್ಸ್



**ಜೀನ್ಸ್ ಉಡುಪುಗಳಲ್ಲಿರುವ ರಿಪ್ಡ್ ಜೀನ್ಸ್, ಪೆನ್ಸಿಲ್ ಕಟ್ ಜೀನ್ಸ್, ಬೂಟ್ ಕಟ್ ಜೀನ್ಸ್... ಮುಂತಾದ ವೈವಿಧ್ಯಗಳನ್ನು ಹಿಂದಕ್ಕೆ ಸರಿಸಿ ಇದೀಗ ರಫೆಲ್ ಜೀನ್ಸ್ ಫ್ಯಾಷನ್ ಜಗತ್ತಿಗೆ ಲಗ್ಗೆ ಇಟ್ಟಿದ್ದು ಯುವತಿಯರಲ್ಲಿ ಹೊಸ ಮೂಡ್ ಕ್ರಿಯೇಟ್ ಮಾಡಿದೆ.**

■ **ಆಶಾ ಎಸ್. ಕುಲಕರ್ಣಿ**

ಯುವತಿಯರಿಗೆ ಜೀನ್ಸ್ ಉಡುಪುಗಳ ಮೇಲಿನ ಮೋಹ ಇಂದು ನಿನ್ನೆಯದಲ್ಲ. ಇಂದು ಹೊಸ ಟ್ರೆಂಡ್ ಸೃಷ್ಟಿಸಿಕೊಂಡು ರಫೆಲ್ ಜೀನ್ಸ್ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಅಂದ ಹಾಗೆ ಇತ್ತೀಚೆಗೆ ಬಾಲಿವುಡ್ ನಟಿ ಆಲಿಯಾ ಭಟ್ ಒಂದು ಪಾರ್ಟಿಯಲ್ಲಿ ಧರಿಸಿದ್ದ ಜೀನ್ಸ್ ಇದೀಗ ಸಖತ್ ಸಂಚಲನ ಮೂಡಿಸಿದೆ. ಜೀನ್ಸ್ ಪ್ಯಾಂಟ್‌ನ್ನು ಹೀಗೂ ಧರಿಸಬಹುದಾ ಎಂದು ಮಹಿಳೆಯರು ಹುಬ್ಬೇರಿಸುತ್ತಿದ್ದಾರೆ. ರಫೆಲ್ ಜೀನ್ಸ್ ಇದೀಗ ಟ್ರೆಂಡಿಂಗ್‌ನಲ್ಲಿರುವ ಔಟ್‌ಫಿಟ್.ಜೀನ್ಸ್ ಉಡುಪು ಎಂದರೇ ಯುವತಿಯರಿಗೆ ಅದೇನೋ ಆಕರ್ಷಣೆ. ಜಮಾನಾ ಬದಲಾದಂತೆ ಅವರವರ

ಅಭಿರುಚಿಗಳಿಗೆ ತಕ್ಕಂತೆ ಜೀನ್ಸ್‌ನಲ್ಲಿ ಹುಟ್ಟಿಕೊಂಡ ವಿನ್ಯಾಸಗಳಿಗೆ ಲೆಕ್ಕವಿಲ್ಲ. ಮೊದಲೆಲ್ಲಾ ಸಿಂಪಲ್ಲಾಗಿ ಒಂದೋ ಎರಡೋ ಬಣ್ಣಗಳಲ್ಲಿ ದೊರೆಯುತ್ತಿದ್ದ ಜೀನ್ಸ್ ಪ್ಯಾಂಟ್‌ಗಳು ಇದೀಗ ದಿನನಿತ್ಯವೂ ಅಪ್‌ಡೇಟ್ ಆಗುತ್ತಿದ್ದು ಇದರಲ್ಲಿಯೇ ಸಾಕಷ್ಟು ವೈವಿಧ್ಯಗಳು ಪ್ರಯೋಗಕ್ಕೆ ಒಳಪಡುತ್ತಿವೆ. ಫ್ಯಾಷನ್ ಲೋಕದಲ್ಲಿ ಬಂದುಹೋಗುತ್ತಿವೆ.

ಅವುಗಳಲ್ಲಿ ಪ್ರಮುಖವಾಗಿ ರಿಪ್ಡ್ ಜೀನ್ಸ್ (ಮಂಡಿಯಿಂದ ಕೆಳಗೆ ಅಲ್ಲಲ್ಲಿ ಹರಿದ ಪ್ಯಾಂಟ್), ಪ್ಯಾಚ್‌ವರ್ಕ್ ಜೀನ್ಸ್, ಪೆನ್ಸಿಲ್ ಕಟ್ ಜೀನ್ಸ್, ಬೂಟ್ ಕಟ್ ಜೀನ್ಸ್, ಆಸಿಡ್ ವಾಶ್ ಜೀನ್ಸ್... ಹೀಗೆ ಸಾಕಷ್ಟು ವರೈಟಿ ಜೀನ್ಸ್‌ಗಳು ಮಾರುಕಟ್ಟೆ ಪ್ರವೇಶಿಸಿ ಎಲ್ಲರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದವು. ಆದರೆ ಇತ್ತೀಚೆಗೆ ಕಾಲ ಸರಿದಂತೆ ಇವೂ ಕೂಡ ಔಟ್‌ಡೇಟೆಡ್ ಪಟ್ಟಿಗೆ ಸೇರುತ್ತಿವೆ. ಸದಾ ಹೊಸತನ್ನೇ